ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಬೆಳಕಿನತ್ತ ಭರವಸೆಯ ಪಯಣ

ಬಾಯಾರಿದವನು ಬಾವಿಯ ಬಳಿಗೆ ಹೋಗಬೇಕಾಗುತ್ತದೆ ಎಂಬ ನಾಣ್ನುಡಿ ಇದೆ. ಅಂಧರು ಮೋಂಬತ್ತಿ ತಯಾರಿಸುವ ಮತ್ತು ಮಾರಾಟ ಮಾಡುವ ತಾಂತ್ರಿಕತೆಯನ್ನು ಕಲಿಯಬೇಕೆಂದರೆ ಮಹಾಬಲೇಶ್ವರಕ್ಕೆ ಬರಬೇಕಾಗುತ್ತಿತ್ತು. ಆದರೆ ಈ ಹಾಸ್ಟೆಲ್ ಪ್ರಾಜೆಕ್ಟ್‌ನಿಂದ ಪ್ರೇರಣೆ ತೆಗೆದುಕೊಂಡು ಅವರುಗಳ ಹಳ್ಳಿ, ಪಟ್ಟಣ, ರಾಜ್ಯಗಳಿಗೆ ಹೋಗಿ ಅಲ್ಲಿಯ ಸಂಸ್ಥೆಗಳೊಡನೆ ಕೈಗೂಡಿಸಿ ಮೋಂಬತ್ತಿ ತರಪೇತು ಮತ್ತು ಮಾರಾಟದ ವ್ಯವಸ್ಥೆಯನ್ನು ವಿಕಾಸಗೊಳಿಸತೊಡಗಿದರು. ಬಾಯಾರಿದವರ ಬಳಿಗೇ ನೀರು ಕೊಂಡೊಯ್ದರು. ಬೇರೆ ರಾಜ್ಯಗಳಲ್ಲಿ ಇಂತಹ ಪ್ರಾಜೆಕ್ಟ್ ಹಾಕಿಕೊಂಡಾಗ, ಭಾಷೆಯ ತೊಂದರೆಯೂ ಎದುರಾಗುತ್ತಿತ್ತು. ಒರಿಯಾ, ತಮಿಳು, ತೆಲುಗು ಮಾತ್ರ ತಿಳಿದವರಿಗೆ ಇವರ ಹಿಂದಿ ಅಥವಾ ಮರಾಠಿ ಅರ್ಥವಾಗುತ್ತಿರಲಿಲ್ಲ. ಎದುರಾದ ಒಂದೊಂದು ಸವಾಲಿಗೂ ಪರಿಹಾರವನ್ನು ಹುಡುಕಿ, ಇಂದು ಭಾವೇಶ್ ಅನ್ಯ ರಾಜ್ಯದ ಅಂಧರು ತಮ್ಮ ಭಾಷೆಯಲ್ಲಿ ತರಪೇತು ಪಡೆಯುವಂತೆ ಆಯೋಜಿಸಿದ್ದಾರೆ. ಇದರಿಂದಾಗಿ ಅವರು ಸುಲಭವಾಗಿ ಈ ಕಲೆಯನ್ನು ಕಲಿತು ಸ್ವಾವಲಂಬಿಗಳಾಗಿ ಜೀವನೋಪಾಯವನ್ನು ಕಂಡುಕೊಳ್ಳಲು ಸಹಾಯಕವಾಗಿದೆ.

ಸನ್‌ರೈಸ್ ಕ್ಯಾಂಡಲ್ಸ್ ಇಂದು ನೇರವಾಗಿ ಹಾಗೂ ಪರೋಕ್ಷವಾಗಿ ಸುಮಾರು 9500 ಮಂದಿ ದೃಷ್ಟಿಹೀನರಿಗೆ ಜೀವನೋಪಾಯದ ಮಾರ್ಗವನ್ನು ಕಲ್ಪಿಸಿದೆ. ಮೋರೇಶ್ವರದ ಹಾಸ್ಟೆಲ್‌ನಲ್ಲಿ ನೂರು ಜನರಿಗೆ ಮಾತ್ರ ಜಾಗ ಇರುವುದರಿಂದ, ಮೈಕ್ರೋ ಮ್ಯಾನುಫ್ಯಾಕ್ಚರಿಂಗ್ ಯೂನಿಟ್‌ಗಳನ್ನು ಹಳ್ಳಿಯ ಮನೆಮನೆಗಳಲ್ಲೇ ಆರಂಭಿಸಿದ್ದಾರೆ. ತರಪೇತು ನೀಡಿ, ಮನೆಯಲ್ಲಿಯೇ ಮೋಂಬತ್ತಿಗಳನ್ನು ತಯಾರಿಸುವ ವಿಧಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಇಂದು 500ಕ್ಕೂ ಹೆಚ್ಚು ಕಂಪನಿಗಳು ಇವರಿಗೆ ಆರ್ಡರ್ಸ್ ಕೊಡುತ್ತಿವೆ. ವರ್ಷದ 365 ದಿನವೂ ಕೈತುಂಬಾ ಕೆಲಸ ಇರುವಂತೆ ಭಾವೇಶ್ ಶ್ರಮಿಸುತ್ತಾರೆ. ದಿಟವಾದ ಅರ್ಥದಲ್ಲಿ 'ಮೇಕ್ ಇನ್ ಇಂಡಿಯಾ' ಸ್ವಯಂ ಉದ್ಯೋಗದ ಈ ಹಾದಿಯಲ್ಲಿ ಸಫಲವಾಗಬಲ್ಲದು.

ಮೋಂಬತ್ತಿಗಳೊಡನೆ 25 ವರ್ಷಗಳ ಪಯಣ ಭಾವೇಶರದು. ತಾವು ಕಲಿತ ಮೋಂಬತ್ತಿ ಮಾಡುವ ಕೌಶಲ ಮತ್ತು ತಾಂತ್ರಿಕತೆಯನ್ನು ತನ್ನೊಳಗೆ ಅಡಗಿಸಿಟ್ಟುಕೊಳ್ಳದೆ ಭಾವೇಶ್ ಬಹಳಷ್ಟು ಅಂಧ ವ್ಯಕ್ತಿಗಳಿಗೆ ಕಲಿಸಿದ್ದರು. ಇಂತಹ ಸಮಯವೂ ಬಂದಿತ್ತು, ಸನ್‌ರೈಸ್ ಕ್ಯಾಂಡಲ್ಸ್ ಜೊತೆ ಬಂದು ಸೇರಲು ಸಾವಿರ ಸಂಖ್ಯೆಯಲ್ಲಿ ಅಂಧರು ಕಾತುರರಾಗಿದ್ದರು. ಅವರೆಲ್ಲರ ವಿದ್ಯಾಭ್ಯಾಸದ ಮಟ್ಟವನ್ನು ನೋಡುವುದಕ್ಕಿಂತ ಹೆಚ್ಚಾಗಿ ಅವರ ಇಚ್ಛಾಶಕ್ತಿಯನ್ನು ಭಾವೇಶ್ ಗಮನಿಸಿದರು. ಬೇರೆ ಬೇರೆ ಕಡೆಯಲ್ಲಿ ಕೆಲಸ ಮಾಡುತ್ತಿರುವ ಈ ಎಲ್ಲ ಅಂಧರಿಗೆ ಕೆಲಸ ತಲುಪಿಸಿ ಕೆಲಸ ಮಾಡಿಸುವುದು ಸುಲಭದ ಮಾತಾಗಿರಲಿಲ್ಲ. ಭಾವೇಶ್ ಅವರಿಗೆ ಈ ದೊಡ್ಡ ತಂಡವನ್ನು ಜೊತೆಗೆ ಕರೆದುಕೊಂಡೇ ಮುನ್ನಡೆಯುವ ಆಸೆ. ಮೊದಲಿಗೆ ಭಾವೇಶ್ ತಮ್ಮ ಮೋರೇಶ್ವರ್ ಯೂನಿಟ್‌ನಲ್ಲಿ ಮೋಂಬತ್ತಿ ತಯಾರಿಸುತ್ತಿದ್ದರು. ಬೇರೆ ರಾಜ್ಯಗಳಲ್ಲಿ ಇರುವ ಅಂಧ ಮಿತ್ರರಿಗೆ ಅವುಗಳನ್ನು ಮಾರಾಟ ಮಾಡಲು ಕಳುಹಿಸುತ್ತಿದ್ದರು. ಆದರೆ ಬೇಗನೆ ಹೊಸದೊಂದು ವ್ಯವಸ್ಥೆ ಮಾಡಿದರು. ಬೇರೆ ಬೇರೆ ರಾಜ್ಯಗಳಲ್ಲಿ ಇರುವ ಅಂಧ ಮಿತ್ರರಿಗೆ ತಾಂತ್ರಿಕತೆ, ನೈಪುಣ್ಯ, ಕೌಶಲವನ್ನು ವರ್ಗಾಯಿಸಿ, ಅವರು ಅಲ್ಲಿಯೇ ಒಂದು ಸಮೂಹದ ರೂಪದಲ್ಲಿ ಸಂಘಟಿಸಿಕೊಂಡು, ಒಂದು ಸ್ವತಂತ್ರ ಕಂಪನಿಯ ರೂಪದಲ್ಲಿ ಸ್ಥಾಪಿಸಲು ಇಂಬು ಕೊಟ್ಟರು. ಈ ಸಂಘಟನೆಯ ಪ್ರತಿಯೊಬ್ಬ ಲಾಭಾರ್ಥಿಗೆ ಮೋಂಬತ್ತಿ ತಯಾರಿಕೆಯ ಕೆಲಸವನ್ನು ಕಾಂಟ್ರಾಕ್ಟ್ ಮೇಲೆ ನೀಡುತ್ತಿದ್ದರು. ಮೋಂಬತ್ತಿಗಳನ್ನು ಮಾರಾಟ ಮಾಡುವವರಿಗೆ ಸಂಬಳಕ್ಕೆ ಬದಲಾಗಿ ಮಾರಿದ